**ಕರ್ನಾಟಕ ಸರಕಾರ**

ಕ್ರ.ಸಂ: ಬಿಜಿಎಂ:ಡಿಯುಡಿಸಿ:5:ಸಿಆರ್:32:2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೆಳಗಾವಿ, ದಿನಾಂಕ:16.06.2012

**ವಿಷಯ:-**ನಿಪ್ಪಾಣಿ ನಗರಸಭೆಗೆ 2012-13ನೇ ಸಾಲಿನಲ್ಲಿ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಗೆ ನಿಗಧಿಪಡಿಸಿದ ಅನುದಾನದಡಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ನೀಡುವ ಕುರಿತು.

**ಓದಿತು**:-1)ಸರ್ಕಾರಿ ಆದೇಶ ಸಂಖ್ಯೆ: ನಅಇ:26:ಎಸ್.ಎಫ್.ಸಿ:2012, ಬೆಂಗಳೂರು, ದಿನಾಂಕ: 19.04.2012

2)ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ:33:ಎಸ್ಎಫ್ಸಿ:2010, ದಿನಾಂಕ: 06.06.2011

3)ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011, ದಿನಾಂಕ: 27.02.2012 (3 ಸುತ್ತೋಲೆಗಳು)

4)ಸರ್ಕಾರಿ ಸುತ್ತೋಲೆ ಸಂಖ್ಯೆ:ಪೌನಿ:ಅಭಿವೃದ್ಧಿ:22.75%:ಸಿಆರ್-18/2011-12 ದಿನಾಂಕ: 13.03.2012

5)ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರ ಪತ್ರ ಸಂಖ್ಯೆ: ನಸನಿ:ಎಸ್ಎಫ್ಸಿ:ಸಿಆರ್-17:2012-13 ದಿನಾಂಕ: 29.05.2012

**ಪ್ರಸ್ತಾವನೆ:**

ಓದಿತು (1)ರ ಸರ್ಕಾರಿ ಆದೇಶದನ್ವಯ 2012-13ನೇ ಸಾಲಿನಲ್ಲಿ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಯಡಿ ನಿಪ್ಪಾಣಿ ನಗರಸಭೆಗೆ ` 341.33 ಲಕ್ಷಗಳಿಗೆ ಅನುದಾನ ನಿಗಧಿಪಡಿಸಲಾಗಿದೆ. ಓದಿತು (5)ರನ್ವಯ ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರು ಸಲ್ಲಿಸಿದ ಕ್ರಿಯಾ ಯೋಜನೆಯಲ್ಲಿ 2011-12ನೇ ಸಾಲಿನ ಮುಂದುವರೆದ 01 ಕಾಮಗಾರಿಗೆ ` 17.43 ಲಕ್ಷಗಳನ್ನು ಕಾಯ್ದಿರಿಸಿ, ಬಾಕಿ ಮೊತ್ತ ` 323.90 ಲಕ್ಷಗಳಿಗೆ 2012-13ನೇ ಸಾಲಿನ 42 ಹೊಸ ಕಾಮಗಾರಿಗಳು, ಹೀಗೆ ಒಟ್ಟು 43 ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಿಸಿದ್ದು, ಅದರಲ್ಲಿ ಶೇ.22.75ರಷ್ಟು ಪ.ಜಾತಿ/ ಪ.ಪಂಗಡದ ಜನಾಂಗದವರಿಗೆ ` 73.68 ಲಕ್ಷಗಳಿಗೆ 18 ಕಾಮಗಾರಿಗಳು, ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣಕ್ಕೆ ` 24.29 ಲಕ್ಷಗಳಿಗೆ 11 ಕಾಮಗಾರಿಗಳು ಹಾಗೂ ಶೇ.3ರಷ್ಟು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಕ್ಕೆ ` 9.72 ಲಕ್ಷಗಳಿಗೆ 05 ಕಾಮಗಾರಿಗಳನ್ನು ಕಾಯ್ದಿರಿಸಿ ಕ್ರಿಯಾ ಯೋಜನೆ ಅನುಮೋದನೆಗೆ ಸಲ್ಲಿಸಿರುತ್ತಾರೆ. ಓದಿತು (2), (3) ಹಾಗೂ (4)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿ ಗಳ ಪ್ರಕಾರ ಪರಿಶೀಲಿಸಲಾಗಿ ಓದಿತು (5)ರಲ್ಲಿ ಸಲ್ಲಿಸಿದ ಪ್ರಸ್ತಾವನೆಯಲ್ಲಿಯ ಕ್ರ.ಸಂ.1ರಲ್ಲಿ ಮುಂದುವರೆದ ಕಾಮಗಾರಿಗಳ ವಿವರಣೆ ಇರುವದಿಲ್ಲ, ಕ್ರ.ಸಂ.5ರಲ್ಲಿ ಪ.ಜಾ./ಪ.ಪಂಗಡ

ಮಹಿಳೆಯರಿಗೆ ಹೊಲಿಗೆ ಯಂತ್ರ ಖರೀದಿಸಿ ನೀಡುವುದು ಕಾಮಗಾರಿಯನ್ನು ಸರ್ಕಾರದ ಸುತ್ತೋಲೆ ಮಾರ್ಗಸೂಚಿ ಪ್ರಕಾರ ತೆಗೆದುಕೊಳ್ಳಲು ಬರುವದಿಲ್ಲ, ಕ್ರ.ಸಂ.8ರಲ್ಲಿ ವಸತಿ ನಿಲಯಕ್ಕೆ ನೀರಿನ ಟ್ಯಾಂಕ್ ರಿಪೇರಿ ಕಾಮಗಾರಿಗೆ ಇದ್ದು, ನಿರ್ಧಿಷ್ಟ ಹೆಸರು ಇರುವದಿಲ್ಲ, ಕ್ರ.ಸಂ.21ರಲ್ಲಿ ಎಸ್.ಎಸ್.ಎಲ್.ಸಿ./ ಪಿ.ಯು.ಸಿ./ ಪದವಿ/ ಸ್ನಾತಕೋತ್ತರ ಪದವಿ/ ಇಂಜಿನಿಯರಿಂಗ್ ಪದವಿಗಳಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಕಾಮಗಾರಿಗೆ ಹಾಗೂ ಕ್ರ.ಸಂ.31ರಲ್ಲಿ ಎಸ್.ಎಸ್.ಎಲ್.ಸಿ ಮೇಲ್ಪಟ್ಟು ಒದ್ದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಕಲ್ಯಾಣ ಕಾರ್ಯಕ್ರಮ ಕಾಮಗಾರಿಗೆ ಹಂತವಾರು ವಿವರಣೆ ನೀಡಿರುವದಿಲ್ಲ. ಆದ್ದರಿಂದ ಸದರಿ 05 ಕಾಮಗಾರಿಗಳನ್ನು ಹೊರತುಪಡಿಸಿ ಈ ಕೆಳಗಿನಂತೆ ` 318.05 ಲಕ್ಷಗಳಿಗೆ 38 ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದಿಸಲು ಪರಿಗಣಿಸಲಾಗಿದೆ.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| *1* | *2* | *3* |
| | **2012–13ನೇ ಸಾಲಿನಲ್ಲಿ ಶೇ.22.75ರಷ್ಟು ಪ.ಜಾತಿ/ ಪ.ಪಂಗಡದ ಜನಾಂಗದವರಿಗೆ ಕಾಯ್ದಿರಿಸಿದ ಕಾಮಗಾರಿಗಳು** | |
| **I** | **ವ್ಯಕ್ತಿ ಸಂಬಂಧಿತ ಅನುಕೂಲತೆಗಳು** | |
| | **ವಸತಿ** | |
| 1 | ಪ.ಜಾ./ಪ.ಪಂಗಡ ಜನರಿಗೆ ಪಕ್ಕಾ ಮನೆ ನಿರ್ಮಾಣಕ್ಕೆ ಸಹಾಯಧನ | 3.48 |
| 2 | ಪ.ಜಾ./ಪ.ಪಂಗಡ ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕ ಕಲ್ಪಿಸುವುದು | 7.00 |
| 3 | ಪ.ಜಾ./ಪ.ಪಂಗಡ ಜನರಿಗೆ ವೈಯಕ್ತಿಕ ಶೌಚಾಲಯ | 10.00 |
| 4 | ಪ.ಜಾ./ಪ.ಪಂಗಡ ಜನರಿಗೆ ಹೈನುಗಾರಿಕೆ ಉದ್ಯೋಗಕ್ಕಾಗಿ ಸಹಾಯಧನ ನೀಡುವುದು | 5.00 |
| | **ಒಟ್ಟು** | **25.48** |
| **II** | **ಸಮುದಾಯ ಆಸ್ತಿಗಳು/ ಸೌಲಭ್ಯಗಳು ಕಾರ್ಯಕ್ರಮ ಘಟಕಗಳು** | |
| | **ಆರೋಗ್ಯ** | |
| 5 | ಅಂಧತ್ವ ನಿವಾರಣೆಗಾಗಿ ಪ.ಜಾ/ ಪ.ಪಂಗಡ ಜನರಿಗೆ ಶಿಬಿರನ್ನು ಏರ್ಪಡಿಸುವುದಕ್ಕಾಗಿ ಸಹಾಯಧನ, ಜಿಲ್ಲಾ ಅಂಧತ್ವ ಸಂಸ್ಥೆಯೊಂದಿಗೆ ಕಾರ್ಯಕ್ರಮ ಏರ್ಪಡಿಸುವದು. | 0.50 |
| 6 | ಆರೋಗ್ಯ ಶಿಬಿರ ಏರ್ಪಡಿಸುವುದು | 0.50 |
| | **ಶಿಕ್ಷಣ** | |
| 7 | ಪ.ಜಾ.ಪ.ಪಂ. ಸಮುದಾಯದಲ್ಲಿ ಕಾನೂನು ಶಿಬಿರಗಳನ್ನು ಏರ್ಪಡಿಸುವುದು | 0.20 |
| 8 | ವಾರ್ಡ ನಂ.9 ರಲ್ಲಿ ಭೋಸಲೆ ಮನೆಯಿಂದ ವಿಕಾಸ ಪೆಂಟರ ಮನೆವರೆಗೆ ಪೇವರ ಬ್ಲಾಕ ಅಳವಡಿಸುವುದು | 2.00 |
| 9 | ವಾರ್ಡ ನಂ.8 ರಲ್ಲಿ ವಾಲ್ಮಿಕಿ ನಗರದಲ್ಲಿ ಚರಂಡಿ ನಿರ್ಮಾಣ | 3.00 |
| 10 | ವಾರ್ಡ ನಂ.22, 24 ರಲ್ಲಿ ಪರೀಟ ಸಮುದಾಯ ಭವನ ದಿಂದ ವಸತಿ ನಿಲಯ ಮತ್ತು ಇಮ್ತಿಯಾಜ ಮಕಾನದಾರ ಮನೆವರೆಗೆ ರಸ್ತೆ ಡಾಂಬರೀಕರಣ ಮಾಡುವುದು | 4.00 |
| 11 | ವಾರ್ಡ ನಂ. 4 ರಲ್ಲಿ ಶಾಹು ನಗರ ಮತ್ತು ಗೋಸಾವಿ ಕಾಲೊನಿವರೆಗೆ ರಸ್ತೆ ಡಾಂಬರೀಕರಣ | 6.00 |

| | | |
|---|---|---|
| 12 | ವಾರ್ಡ ನಂ.27 ಮತ್ತು 28 ಖರಿ ಕಾರ್ನರ ಭಂಗಿ ಚಾಳದಿಂದ ಶಿವಾಜಿನಗರ 6ನೇ ಗಲ್ಲಿ ತಹಸೀಲ್ದಾರ ಪ್ಲಾಟ ಗಣಪಾ ಸೂರ್ಯವಂಶಿ ಮನೆವರೆಗೆ ರಸ್ತೆ ಡಾಂಬರಿಕರಣ | 10.00 |
| 13 | ವಾರ್ಡ ನಂ.3 ರಲ್ಲಿ ಶ್ರೀನಗರ ಪಟೇಲ ಮನೆಯಿಂದ ಸಾರ್ವಜನಿಕ ಶೌಚಾಲಯ ವರೆಗೆ ರಸ್ತೆ ಡಾಂಬರೀಕರಣ | 5.00 |
| 14 | ವಾರ್ಡ ನಂ.24 ರಲ್ಲಿ ಸಿದ್ಧಾರ್ಥ ನಗರದಲ್ಲಿ ಮಾರುತಿ ಕಾಂಬಳೆ ಮನೆಯಿಂದ ಅವಿನಾಶ ಮಾನೆ ಹಾಗೂ ಸಂದಿಪ ಮಾನೆ ಮನೆವರೆಗೆ ರಸ್ತೆ ಡಾಂಬರೀಕರಣ | 3.00 |
| 15 | ವಾರ್ಡ ನಂ.26 ಅದರ್ಶನಗರ ರಾಷ್ಟ್ರೀಯ ಹೆದ್ದಾರಿಯಿಂದ ನಂದು ಕಾಂಬಳೆ ಮನೆವರೆಗೆ ರಸ್ತ ಡಾಂಬರಿಕರಣ | 5.00 |
| 16 | ವಾರ್ಡ ನಂ.6 ರಲ್ಲಿ ಪ.ಜಾ.ಪ.ಪಂ. ಜನರಿಗೆ ಮೋಬಾಯಿಲ ಶೌಚಾಲಯ ಒದಗಿಸಿ ಕೊಡುವುದು | 4.65 |
| | **ಒಟ್ಟು** | **43.85** |
| | **ಶೇ.22.75ರ ಕಾಮಗಾರಿಗಳ ಒಟ್ಟು ಮೊತ್ತ** | **69.33** |
| | **ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣಕ್ಕೆ ಕಾಯ್ದಿರಿಸಿದ ಕಾಮಗಾರಿಗಳು** | |
| **I** | **ವ್ಯಕ್ತಿ ಸಂಬಂಧಿತ ಅನುಕೂಲತೆಗಳು** | |
| | **ವಸತಿ** | |
| 17 | ಇತರ ಬಡ ಜನರಿಗೆ ಪಕ್ಕಾ ಮನೆ ನಿರ್ಮಾಣ | 2.10 |
| | **ಆರೋಗ್ಯ** | |
| 18 | ಶಸ್ತ್ರ ಚಿಕಿತ್ಸೆಗಾಗಿ ಸಹಾಯಧನ | 0.50 |
| | **ಇತರೆ** | |
| 19 | ಇತರ ಬಡ ಜನರಿಗೆ ವೈವಕ್ತಿಕ ಶೌಚಾಲಯಕ್ಕಾಗಿ ಸಹಾಯಧನ | 3.20 |
| 20 | ಇತರ ಬಡ ಜನರಿಗೆ ಆಡುಗೆ ಅನಿಲ ಸಂಪರ್ಕ ಕಲ್ಪಿಸುವುದು | 2.00 |
| 21 | ಕುಡಿಯುವ ನೀರಿನ ಸಂಪರ್ಕ ವೆಚ್ಚ ಭರಿಸುವುದು | 0.92 |
| | **ಒಟ್ಟು** | **8.72** |
| **II** | **ಸಮುದಾಯ ಆಸ್ತಿಗಳು/ ಸೌಲಭ್ಯಗಳು ಕಾರ್ಯಕ್ರಮ ಘಟಕಗಳು** | |
| | **ಆರೋಗ್ಯ** | |
| 22 | ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸುವುದು | 0.50 |
| | **ಮೂಲ ಸೌಕರ್ಯ** | |
| 23 | ವಾರ್ಡ ನಂ.10 ಖೋತ ಗಲ್ಲಿ ಚೌಗಲೆ ಮನೆಯಿಂದ ತಾರಳೆ ಕಾರ್ಯಾಲಯವರೆಗೆ ರಸ್ತೆ ಡಾಂಬರೀಕರಣ | 2.00 |
| 24 | ವಾರ್ಡ ನಂ.10 ಕೋಠಿವಾಲೆ ಕಾಂಪ್ಲೆಕ್ಷನಿಂದ ಮಾಗಾವಕರ ಮನೆವರೆಗೆ ರಸ್ತೆ ಡಾಂಬರೀಕರಣ | 3.00 |
| 25 | ವಾರ್ಡ ನಂ.26 ರಲ್ಲಿ ಗಿಜವಣೆಕರ ಚಾಳದಲ್ಲಿ ಪೇವರ ಬ್ಲಾಕ ಅಳವಡಿಸುವುದು | 2.00 |
| 26 | ವಾರ್ಡ ನಂ.11 ರಲ್ಲಿ ಲಾಡ ಕಾಂಪ್ಲೆಕ್ಷ ದಿಂದ ಕೊಠಿವಾಲೆ ಕಾರ್ನರವರೆಗೆ ರಸ್ತೆ ಡಾಂಬರೀಕರಣ | 7.07 |
| | **ಒಟ್ಟು** | **14.57** |
| | **ಶೇ.7.25ರ ಕಾಮಗಾರಿಗಳ ಒಟ್ಟು ಮೊತ್ತ** | **23.29** |
| | **ಶೇ.3ರಷ್ಟು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಕ್ಕೆ ಕಾಯ್ದಿರಿಸಿದ ಕಾಮಗಾರಿಗಳು** | |
| **I** | **ವ್ಯಕ್ತಿ ಸಂಬಂಧಿತ ಅನುಕೂಲತೆಗಳು** | |
| | **ಉದ್ಯೋಗ** | |
| 27 | ವಿಕಲಚೇತನ ಜನರಿಗೆ ಸಣ್ಣ ಉದ್ಯೋಗ ಆರಂಭಿಸಲು ಸಹಾಯಧನ | 1.29 |

| | | |
|---|---|---|
| | **ಇತರೆ** | |
| 28 | ಪಕ್ಕಾ ಮನೆ ನಿರ್ಮಾಣ | 2.10 |
| | **ಒಟ್ಟು** | **3.39** |
| **II** | **ಸಮುದಾಯ ಆಸ್ತಿಗಳು/ ಸೌಲಭ್ಯಗಳು ಕಾರ್ಯಕ್ರಮ ಘಟಕಗಳು** | |
| 29 | ಆರೋಗ್ಯ ಮತ್ತು ಅಂಧತ್ವ ನಿವಾರಣೆ ಶಿಬಿರ ಏರ್ಪಡಿಸುವುದು | 0.50 |
| 30 | ನಿಪ್ಪಾಣಿ ನಗರ ವ್ಯಾಪ್ತಿಯಲ್ಲಿ ಬರುವ ಸರಕಾರಿ ಕಚೇರಿ ಸಮುದಾಯ ಭವನ ಮತ್ತು ಸಾರ್ವಜನಿಕ ಕಟ್ಟಡಗಳ/ಶಾಲೆಗಳ ಮುಂದೆ ಜಾರುದಾರಿ ನಿರ್ಮಾಣ | 5.33 |
| | **ಒಟ್ಟು** | **5.83** |
| | **ಶೇ.3ರ ಕಾಮಗಾರಿಗಳ ಒಟ್ಟು ಮೊತ್ತ** | **9.22** |
| **ಎ** | **ಉಳಿಕೆ ಅನುದಾನದಲ್ಲಿ ಶೇ.50 ರಷ್ಟು ತೆಗೆದುಕೊಂಡ ಕಾಮಗಾರಿಗಳು** | |
| 31 | ನಿಪ್ಪಾಣಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಯಮಗರ್ಣಿ ಜಾಕವೆಲ್ ಮತ್ತು ಜವಾಹರಲಾಲ ನೀರು ಶುದ್ಧೀಕರಣ ಘಟಕಗಳಿಗೆ ವಿದ್ಯುತ ಸರಬರಾಜು ಸುಧಾರಣೆಗಾಗಿ ಎಕ್ಸಪ್ರೆಸ್ ಫಿಡರಲೈನ್ ಅಳವಡಿಸುವುದು | 20.00 |
| 32 | ಈಗ ಹಾಲಿ ಇರುವ ತರಕಾರಿ ಮಾರುಕಟ್ಟೆ ಸ್ಥಳದಲ್ಲಿ ಕಟ್ಟಡಗಳು ಶಿಥಿಲಗೊಂಡಿದ್ದು ನವೀನ ತರಕಾರಿ ಮಾರುಕಟ್ಟೆ ನಿರ್ಮಾಣಕ್ಕಾಗಿ | 30.00 |
| 33 | ಗುಂಡ ಸ್ಮಾಶಾನ ಭೂಮಿ ಅಭಿವೃದ್ಧಿ ಪಡಿಸಲು | 10.00 |
| 34 | ವಾರ್ಡ ನಂ.31 ಮಂಗಳವಾರ ಪೇಠ ಕಾರ್ನರದಿಂದ ಹರಿನಗರ ಹೈವೆ ಲಿಂಕ್ ರೋಡವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ | 10.00 |
| 35 | ಹಳೇ ಪಿ.ಬಿ. ರಸ್ತೆ ಮುನಸಿಪಲ್ ಹೈಸ್ಕೂಲ ಕಂಪೌಂಡದಿಂದ ಗುಂಡ ಸ್ಮಶಾನ ಭೂಮಿ ಕಾರ್ನರ ವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ | 9.40 |
| 36 | ನಿಪ್ಪಾಣಿ ನಗರಸಭೆಗೆ ನಿರಂತರ ನೀರು ಸರಬರಾಜು 24x7 ಯೋಜನೆ ಮಂಜೂರಾಗಿದ್ದು ಇದಕ್ಕಾಗಿ ಶೇ. 10 ರಷ್ಟು ಹಣಕ್ಕಾಗಿ ಕಡಿಮೆ ಬೀಳುವ ಹಣ ರೂ.11.90 ಲಕ್ಷ ನೀಡಲು ಅನುಮೋದನೆ ನೀಡುವುದು | 11.90 |
| 37 | ನಿಪ್ಪಾಣಿ ನಗರಸಭೆ ಒಳಚರಂಡಿ ಯೋಜನೆಗಾಗಿ ಎಸ್.ಟಿ.ಪಿ. ಜಮೀನನ್ನು ಗುರುತಿಸಲಾಗಿದ್ದು ಸದರಿ ಜಮೀನನ್ನು ಹಸ್ತಾಂತರಿಸಿಕೊಳ್ಳಲು ಉಪವಿಭಾಗಾಧಿಕಾರಿಗಳು ಕೋರಿರುವ ರೂ.16.805 ಲಕ್ಷಗಳನ್ನು ನೀಡಲು ಅನುಮೋದಿಸುವುದು | 16.80 |
| | **ಒಟ್ಟು** | **108.10** |
| **ಬಿ** | **ಉಳಿಕೆ ಅನುದಾನದಲ್ಲಿ ಶೇ.50 ರಷ್ಟು ತೆಗೆದುಕೊಂಡ ಕಾಮಗಾರಿಗಳು** | |
| 38 | ನಿಪ್ಪಾಣಿ ನಗರಸಭೆಯು ಈಗಾಗಲೇ ಘನತ್ಯಾಜ್ಯ ವಸ್ತುಗಳ ಘಟಕದಲ್ಲಿ ವರ್ಮಿ ಕಂಪೋಸ್ಟ ಘಟಕ ನಿರ್ಮಾಣಕ್ಕಾಗಿ 2011-12ನೇ ಸಾಲಿನ ಎಸ್.ಎಫ್.ಸಿ. ನಿಧಿ ಮತ್ತು 13ನೇ ಹಣಕಾಸು ಯೋಜನೆಯಲ್ಲಿ ಹಣವನ್ನು ಟೆಂಡರ ಕರೆದಿರುತ್ತದೆ. ಆದ್ದರಿಂದ ಸದರಿ ಯೋಜನೆಯನ್ನು ಕೈಬಿಟ್ಟು. ಸದರಿ ಬಾಬ್ತು ಹಣವನ್ನು ನಿಪ್ಪಾನಿ ನಗರಸಭೆಗೆ ಮಂಜೂರಾಗಿರುವ ನಿರಂತರ ನೀರು ಸರಬರಾಜು ಯೋಜನೆ 24X7 ಯೋಜನೆಯ ಅಂದಾಜಿನ ಶೇ. 10 ರಷ್ಟು ಮೊತ್ತಕ್ಕಾಗಿ ರೂ. 108.105 ಲಕ್ಷಗಳನ್ನು ಪಾವತಿಸಲು ಅನುಮೋದನೆ ನೀಡಲು | 108.11 |
| | **ಒಟ್ಟು** | **108.11** |
| | **ಅಂತೂ ಒಟ್ಟು** | **318.05** |

**<u>ಆದೇಶ</u>**

ಮೇಲಿನ ಪ್ರಸ್ತಾವನೆಯಂತೆ ನಿಪ್ಪಾಣಿ ನಗರಸಭೆಗೆ 2012-13ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಯಡಿ ` 318.05 ಲಕ್ಷಗಳ ಅನುದಾನಕ್ಕೆ ಒಟ್ಟು 38 ಕಾಮಗಾರಿಗಳನ್ನು

ಕೈಕೊಳ್ಳಲು ಕ್ರಿಯಾ ಯೋಜನೆ ಅನುಮೋದನೆ ನೀಡಿ ಆದೇಶಿಸಿದೆ ಹಾಗೂ ಬಾಕಿ ಅನುದಾನ ` 23.28 ಲಕ್ಷಗಳಿಗೆ ಓದಿತು (5)ರಲ್ಲಿ ಸಲ್ಲಿಸಿದ ಪ್ರಸ್ತಾವನೆಯಲ್ಲಿಯ ಕ್ರ.ಸಂ.1, 8, 21 ಮತ್ತು 31ರ ಕಾಮಗಾರಿಗಳಿಗೆ ವಿವರಣೆಯನ್ನು ನೀಡುವದು ಹಾಗೂ ಕ್ರ.ಸಂ.5ರ ಕಾಮಗಾರಿಯನ್ನು ಹೊರತುಪಡಿಸಿ ಓದಿತು (3)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿ ಪ್ರಕಾರ ಬೇರೆ ಕಾಮಗಾರಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

**ಷರತ್ತುಗಳು:**

1. ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆಯುವದು.

2. ಪ್ಯಾಕೇಜ್ ರೀತಿಯಲ್ಲಿ ಅವಶ್ಯಕನುಗುಣವಾಗಿ ಅಲ್ಪಾವಧಿ ಟೆಂಡರ ಕರೆಯಲು ಕರ್ನಾಟಕ ಪಾರದರ್ಶಕ ಕಾಯ್ದೆ 2000ರನ್ವಯ ನಿಬಂಧನೆಗಳಿಗೆ ಒಳಪಟ್ಟು ಕ್ರಮ ಕೈಗೊಳ್ಳುವದು.

3. ಸಾಮಗ್ರಿಗಳನ್ನು ಖರೀದಿಸುವ ಮೊದಲು KG1/ KG2/ KG3 ರ ಪ್ರಕಾರ ಟೆಂಡರ್ ಡಾಕುಮೆಂಟ್ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು ಟೆಂಡರ್ ಕರೆಯುವದು.

4. ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳುವದು ಹಾಗೂ 3ನೇ ಪಾರ್ಟಿಯವರಿಂದ ತಪಾಸಣೆ ಮಾಡಿಸಿದ ನಂತರ ಹಣ ಪಾವತಿ ಮಾಡತಕ್ಕದ್ದು.

5. ಈ ಕಾಮಗಾರಿಗಳು ಬೇರೆ ಯಾವುದೇ ಯೋಜನೆ/ ಅನುದಾನದಡಿ ಕೈಗೊಂಡಿರಬಾರದು.

6. ಸಾಮಗ್ರಿಗಳನ್ನು ಅಳತೆ ಪುಸ್ತಕದಲ್ಲಿ ಬರೆದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಕಾರ್ಯನಿರ್ವಾಹಕ ಅಭಿಯಂತರರು ಇವರಿಂದ ಪರಿಶೀಲಿಸಿದ ನಂತರ ಬಿಲ್ಲು ಪಾವತಿ ಮಾಡಿ ಸ್ಟಾಕ್ ಬುಕ್‌ದಲ್ಲಿ ನಮೂದಿಸುವದು.

**ಸಹಿ/-**
**(ವ್ಹಿ. ಅನ್ಬುಕುಮಾರ)**
ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿಯನ್ನು:**

1. ಗೌರವಾದರಗಳೊಂದಿಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

2. ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ

3. ಪೌರಾಯುಕ್ತರು, ನಗರಸಭೆ ನಿಪ್ಪಾಣಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/-**
ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ